# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.</u>

<u>ಸಿ.ಸಿ. ನಂ.30/2022</u>

CW-5/PW-4

| | | |
|---|---|---|
| ಹೆಸರು | : | Mahesh |
| ತಂದೆ/ಗಂಡನ ಹೆಸರು | : | Mallaveraiah |
| ವಯಸ್ಸು | : | 54 ವರ್ಷ |
| ವೃತ್ತಿ | : | Provision Store |
| ವಾಸ ಸ್ಥಳ | : | Ijoor, Ramanagara |
| ದಿನಾಂಕ | : | 02-04-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಸಾಕ್ಷಿಗೆ ನಿಪಿ-5 ಮಹಜರ್ ನ್ನು ತೋರಿಸಲಾಗಿ 21.12.2021 ರಂದು ನಮ್ಮ ಅಂಗಡಿಯ ಮುಂಭಾಗ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಸ್ವಾತಿ ಎಂಬ ಹುಡುಗಿಯ ಕತ್ತಿನ ಚಿನ್ನದ ಸರವನ್ನು ನಮ್ಮ ಅಂಗಡಿಯ ಸ್ವಲ್ಪ ಮುಂಭಾಯ ಯಾರೋ ಕಿತ್ತುಕೊಂಡು ಹೋಗಿದ್ದರು ಅ ವಿಚಾರವಾಗಿ ಪೊಲೀಸರು ಬಂದು ಮಹಜರ ಮಾಡಿದರು. ಆ ಕಾಲಕ್ಕೆ ಸಹಿ ಮಾಡಿದ್ದೇನೆ ನನ್ನ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಿರುತ್ತೇನೆ . ನಿಪಿ 5 ಕ್ಕೆ ನನ್ನ ಜೊತೆ ಅಕ್ಕ ಪಕ್ಕದವರು ಸಹ ಸಹಿ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ನಾನು ನೋಡಿಲ್ಲ. ಆದರೆ ಪೊಲೀಸರು ಮಹಜರ ಕಾಲಕ್ಕೆ ಚೈನನ್ನು ಕದ್ದು ಕೊಂಡು ಹೋದ ಅಸಾಮಿಯನ್ನು ಕರೆದುಕೊಂಡು ಬಂದಿದ್ದರು. ಆದರೆ ಆತನೇ ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿರುವ ಆರೋಪಿಯೇ ಎಂದು ನನಗೆ ಹೇಳಲು ಆಗುವುದಿಲ್ಲ.

<u>ಸಿ.ಸಿ. ನಂ.1/20ರಲ್ಲಿ</u>
CW-1/PW-1

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ನಿಪಿ 5 ಮಹಜರ ಕಾಲಕ್ಕೆ ಪೊಲೀಸರು ನಮ್ಮ ಅಂಗಡಿಯ ಮುಂದೆ ಕರೆದುಕೊಂಡ ಬಂದಿದ್ದ ಆಸಾಮಿಯ ವಿ ಸಿ ಮುಖಾಂತರ ಹಾಜರುಪಡಿಸಿರುವ ಆರೋಪಿಯೇ ಎಂದರೆ ನೆನಪಿಲ್ಲ, ಆರೋಪಿಯೇ ಎಂದು ಗೊತ್ತಿದ್ದರೂ ಸಹ ನೆನಪಿಲ್ಲ ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ. ಹೆಚ್ ಆರ ಎಸ್ . ವಕೀಲರಿಂದಃ-</u>

ನನಗೆ ಕನ್ನಡ ಓದಲು ಬರೆಯಲು ಲಬರುತ್ತದೆ. ನಿಪಿ -5 ರಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿಲ್ಲ. ನಿಪಿ-5 ಕ್ಕೆ ನಾನು ಸಹಿ ಹಾಕಿದ್ದು ಪೊಲೀಸ್ ಠಾಣೆಯಲ್ಲಿ ಎಂದರೆ ಸರಿಯಲ್ಲ. ನಿಪಿ-5 ಮಹಜರ ಬರೆದವರು ಹೆಸರು ನನಗೆ ಗೊತ್ತಿಲ್ಲ. ಚಾಸಾ-1 ರವರು ನನಗೆ ಪರಿಚಯ. ಆದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ 105ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.